ಕ್ರಿ:ಮಿಸ್:ನಂ.366/2021

ಪಿ.ಡಬ್ಲ್ಯೂ-1

**ದಿ:17-10-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು:** ಎದುರುದಾರರ ಪರ ಶ್ರೀ ಜೆ ಟಿ ಜೆ **ವಕೀಲರಿಂದ.**

ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ವಿಚಾರವು ನಾನು ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ವಿಷಯಗಳನ್ನು ನಾನು ಓದಿ ಸಹಿ ಹಾಕಿರುತ್ತೇನೆ. ನನ್ನ ತಂದೆ ತಾಯಿ ಬಡತನದಲ್ಲಿರುತ್ತಾರೆ. ಆದ್ದರಿಂದ ಎದುರುದಾರರು ನಿಮ್ಮ ಮದುವೆಯ ಖರ್ಚನ್ನು ಅವರೇ ಭರಿಸಿ ನಿಮ್ಮನ್ನು ಮದುವೆ ಆಗಿರುತ್ತಾರೆಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಎದುರುದಾರರಿಗೆ ಮದುವೆ ಸಮಯದಲ್ಲಿ ಚಿನಾಭರಣಗಳನ್ನು ನೀಡಿದ್ದು, ಅದಕ್ಕೆ ರಸೀದಿಗಳು ಇದ್ದು, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ಅಭ್ಯಂತರ ಇಲ್ಲ. ನೀವು ಯಾವುದೇ ಎದುರುದಾರರಿಗೆ ಬಂಗಾರದ ಆಭರಣಗಳನ್ನು ನೀಡಿರುವುದಿಲ್ಲ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಾ ಎಂದರೆ ಸರಿಯಲ್ಲ. ಎದುರುದಾರರು ಮದುವೆಯ ಯಾವುದೇ ಖರ್ಚನ್ನು ವಹಿಸಿಕೊಂಡಿರುವುದಿಲ್ಲ, ಎಲ್ಲಾ ಖರ್ಚನ್ನು ನಮ್ಮ ತಂದೆಯವರೇ ಮಾಡಿರುತ್ತಾರೆ. ಮದುವೆಗೆ ಎಷ್ಟು ಖರ್ಚಾಯಿತು ಎಂದು ನನಗೆ ತಿಳಿದಿರುವುದಿಲ್ಲ, ನನ್ನ ತಂದೆಗೆ ಗೊತ್ತಿರುತ್ತದೆ. ನನ್ನ ತಂದೆ ನನ್ನ ಮದುವೆಗೆ ಸಾಲ ಮಾಡಿದ್ದು, ಈಗ ಅದನ್ನು ತೀರಿಸುತ್ತಿದ್ದಾರೆ. ನನ್ನ ತಂದೆ ನಮ್ಮ ಸಂಬಂಧಿಕರಾದ ಷಣ್ಮುಗಂ ಅವರ ಹತ್ತಿರ ಮದುವೆಗೆ ಸಾಲ ಮಾಡಿದ್ದು, ಎಷ್ಟು ಸಾಲ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ಮದುವೆಯಾದ ನಂತರ ಒಂದೂವರೆ ವರ್ಷದಲ್ಲಿ ಮೊದಲನೇ ಮಗು ಜನಿಸಿರುತ್ತದೆ.

ಎದುರುದಾರರು ಮದುವೆಯಾದ ಒಂದು-ಎರಡು ವರ್ಷಗಳಿಗೆ ನನಗೆ ಮಕ್ಕಳಾಗಿಲ್ಲ ಎಂದು ಕಿರುಕುಳ ನೀಡಿಲ್ಲ ಎಂದರೆ ಸರಿ. ನೀವು ಎದುರದಾರರು ನಿಮಗೆ ಮಕ್ಕಳಾಗುತ್ತಿಲ್ಲ ಎಂದು ಸಿಡಿಪಿಒ ಕಛೇರಿಯಲ್ಲಿ ನೀವು ಸುಳ್ಳು ದೂರು ನೀಡಿರುತ್ತಿರಾ ಎಂದರೆ ಸಾಕ್ಷಿ ಎದುರುದಾರರು ನಿನಗೆ ಮಕ್ಕಳು ಆಗುತ್ತಿರಲಿಲ್ಲ, ನನ್ನನ್ನು ಮದುವೆ ಆಗಿರುವುದಕ್ಕೆ ನಿನಗೆ ಮಕ್ಕಳು ಆಗಿರುತ್ತದೆ ಎಂದು ಚುಚ್ಚು ಮಾತನಾಡುತ್ತಿದದರು ಎಂದು ನುಡಿದಿರುತ್ತಾರೆ. ಎದುರುದಾರರು ಮೇಲೆ ಹೇಳಿದ ರೀತಿ ನಿಮಗೆ ಕಿರುಕುಳ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಗರ್ಬಿಣಿ ಆದ ಸಮಯದಲ್ಲಿ ಕೋವಿಡ್ ಸಮಯ

ಇತ್ತು ಎಂದರೆ ಸರಿ. ನನಗೆ ರಕ್ತಹೀನತೆ ತೊಂದರೆ ಇತ್ತು ಎಂದರೆ ಸರಿ. ಆದರೆ ಎದುರುದಾರರು ನನಗೆ ಯಾವುದೇ ಚಿಕಿತ್ಸೆ ಕೊಡಿಸಿರುವುದಿಲ್ಲ. ನೀವು ಗರ್ಭಿಣಿ ಇದ್ದಾಗ ಪ್ರೇಮಲತ ಡಾಕ್ಟರ್ ಹತ್ತಿರ ನಿಮಗೆ ಚಿಕಿತ್ಸೆ ಕೊಡಿಸಿರುತ್ತಾರೆಂದರೆ ಸರಿ. ನೀವು ಗರ್ಭಿಣಿ ಇದ್ದ ಕಾರಣ ನಿಮ್ಮ ತವರು ಮನೆ ಹಳ್ಳಿಯಲ್ಲಿದ್ದ ಕಾರಣ ನಿಮಗೆ ಚಿಕಿತ್ಸೆಯನ್ನು ಸರಿಯಾದ ಸಮಯಕ್ಕೆ ಕೊಡಿಸಲು ಕಷ್ಟವಾಗುತ್ತದೆ ಎಂದು ಎದುರುದಾರರು ನಿಮ್ಮನ್ನು ಅವರ ಮನೆಯಲ್ಲಿ ಇಟ್ಟುಕೊಂಡು ನೀವು ಮಗುವಿನ ಜನನ ಕೊಡುವವರೆಗೂ ನಿಮ್ಮನ್ನು ಅವರ ಮನೆಯಲ್ಲಿ ಇಟ್ಟುಕೊಂಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ನನ್ನನ್ನು ನನ್ನ ತವರು ಮನೆಗೆ ಕಳುಹಿಸಿಕೊಟ್ಟಿಲ್ಲ ಎಂದು ನುಡಿದಿರುತ್ತಾರೆ. ಎದುರುದಾರರು ನಿಮ್ಮ ಆರೋಗ್ಯದ ವಿಚಾರವಾಗಿ ನಿಮ್ಮನ್ನು ತವರು ಮನೆಗೆ ಕಳುಹಿಸಿರುವುದಿಲ್ಲ, ಅವರೇ ನೋಡಿಕೊಳ್ಳುತ್ತಿದ್ದರು ಎಂದರೆ ಅದು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನೀವು ಗರ್ಭಿಣಿ ಆದಾಗಿದಿಂದ ಮಗು ಜನನ ವಾಗುವವರೆಗೂ ಎದುರುದಾರರೇ ನಿಮ್ಮ ಖರ್ಚು ವೆಚ್ಚಗಳನ್ನು ನೋಡಿಕೊಂಡಿರುತ್ತಾರೆಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ. ಎದುರುದಾರರು ನಿಮಗೆ ಕರೆ ಮಾಡಿ ಬೈಯ್ಯುತ್ತಿರಲಿಲ್ಲ ಎಂದರೆ ಸರಿಯಲ್ಲ. ಎದುರುದಾರರು ನಿಮಗೆ ಯಾವುದೇ ರೀತಿ ಕಿರುಕುಳ ನೀಡಿರುವುದಿಲ್ಲ, ದುರುದ್ದೇಶದಿಂದ ಅವರ ಮೇಲೆ ಸಿಡಿಪಿಒ ಕಛೇರಿಗೆ ದೂರನ್ನು ನೀಡಿರುತ್ತೀರಾ ಎಂದರೆ ಸರಿಯಲ್ಲ. ನನ್ನ ಅಣ್ಣನಿಗೆ ನಾನು 2ನೇ ಮಗುವಿಗೆ ಬಾಣಂತನಕ್ಕೆ ಬಂದಾಗ ಮದುವೆ ಆಗಿರುತ್ತದೆ.

ನನ್ನ ಅಣ್ಣ ಮತ್ತು ಅತ್ತಿಗೆ ನಡುವೆ ಗಲಾಟೆ ಆಗುತ್ತಿದ್ದು, ನನ್ನ ಅತ್ತಿಗೆ ನಮ್ಮ ಅಣ್ಣ, ಅಪ್ಪ ಅಮ್ಮ ಹಾಗೂ ನನ್ನ ಮೇಲೆ ಪೊಲೀಸ್ ಠಾಣೆಯಲ್ಲಿ ದೂರು ನೀಡಿರುತ್ತಾರೆಂದರೆ ಸರಿ. ಸಾಕ್ಷಿ ಮುಂದುವರಿದು ನಾವು ಅವರ ಜೊತೆ ಇರಲಿಲ್ಲ, ನಾವು ಬೇರೆ ಸಂಸಾರ ಮಾಡಿಕೊಂಡು ಇದ್ದೆವು ಎಂದು ನುಡಿದಿರುತ್ತಾರೆ. ನಮ್ಮ ಅತ್ತಿಗೆ ನನ್ನ ಮತ್ತು ನಮ್ಮ ಅಣ್ಣ ಹಾಗೂ ನನ್ನ ತಂದೆ ತಾಯಿ ಮೇಲೆ 2-3 ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಿರುತ್ತಾರೆಂದರೆ ಸರಿ. ಸಾಕ್ಷಿ ಮುಂದುವರಿದು ಹಣಕ್ಕಾಗಿ ಮಾಡಿರುತ್ತಾರೆಂದು ನುಡಿದಿರುತ್ತಾರೆ. ನಿಮ್ಮ ಅಣ್ಣ ಅತ್ತಿಗೆ ಮದುವೆಗೂ ಮುಂಚೆ ನಿಮ್ಮ ಗಂಡನಿಗೂ ಹಾಗೂ ನಿಮ್ಮ ಅತ್ತಿಗೆಗೂ ಯಾವುದೇ ಕಾಂಟಕ್ಟ್ ಇರುವುದಿಲ್ಲ ಎಂದರೆ ಸಾಕ್ಷಿ ಅದು

ನನಗೆ ಗೊತ್ತಿರುವುದಿಲ್ಲ, ಆದರೆ ಈಗ ಕಾಂಟಕ್ಟ ಇರುತ್ತದೆ ಎಂದು ನುಡಿದಿರುತ್ತಾರೆ. ನಮ್ಮ ಅಣ್ಣ ಅತ್ತಿಗೆಗೆ ಗಲಾಟೆಯಾದ ವಿಚಾರವಾಗಿ ನಾನು ನನ್ನಗಂಡನಿಗೆ ಅವರಿಗೆ ಬುದ್ದಿವಾದ ಹೇಳಲು ಕರೆ ಮಾಡಿ ಕೊಟ್ಟಿರುವುದಿಲ್ಲ, ಹಾಗೂ ಯಾವುದೇ ವಿಚಾರವನ್ನು ನನ್ನ ಗಂಡನ ಹತ್ತಿರ ಹೇಳಿರುವುದಿಲ್ಲ.

ಈ ಸಮಯದಲ್ಲಿ ಮುಂದುವರಿದ ಮುಖ್ಯ ವಿಚಾರಣೆಗಾಗಿ ಸಮಯಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಕೇ. ಸ. ಇ. ಎ. ಒ.**

ಸಹಿ/-

1 ನೇ **ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ. ರವರು, ತರೀಕೆರೆ.**